ಓ ಎಸ್ ನಂಃ 327/2018

ಪಿ. ಡಬ್ಲ್ಯೂ ಃ 1

ದಿಃ 27.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಹೆಚ್.ಜೆ.ಡಿ ವಕೀಲರಿಂದ ಃ

ನನ್ನ ಮುಖ್ಯ ವಿಚಾರಣೆಯನ್ನು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ಮುಖ್ಯ ವಿಚಾರಣೆಯನ್ನು ನಾನು ಮತ್ತು ಅಶ್ವಥನಾರಾಯಣ ಇವರ ಪರವಾಗಿ ಸಲ್ಲಿಸಿದ್ದೇನೆ. ನಾನು ನನ್ನ ಪರವಾಗಿ ಮತ್ತು ನನ್ನ ತಂಗಿಯ ಪರವಾಗಿ ಮುಖ್ಯ ವಿಚಾರಣೆ ಸಲ್ಲಿಸಿದ್ದೇನೆ. ದಾವಾ ಸ್ವತ್ತುಗಳಲ್ಲಿ ಭಾಗ ಬೇಕೆಂದು ದಾವೆ ಮಾಡಿದ್ದೇನೆ. ನಾನು ಮತ್ತು ನನ್ನ ತಂಗಿ ಸೇರಿ ನನ್ನ ತಮ್ಮಂದಿರ ವಿರುದ್ದ ದಾವೆ ಸಲ್ಲಿಸಿದ್ದೇವೆ. ನಾವು 8 ಎಕರೆ 6 ಗುಂಟೆ ಜಮೀನಿಗಾಗಿ ದಾವೆ ಮಾಡಿದ್ದೇವೆ. ಎಷ್ಟು ಐಟಂ ಸ್ವತ್ತುಗಳಿವೆ ಎಂದು ಗೊತ್ತಿಲ್ಲ. ನಾನು ಸ.ನಂ. 30, ಸ.ನಂ.32 ಮತ್ತು ಸ.ನಂ. 34 ಇವುಗಳಿಗಾಗಿ ದಾವೆ ಮಾಡಿದ್ದೇನೆ. ಒಂದೊಂದು ಸ್ವತ್ತಿನ ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಹೇಳಲಾಗುವುದಿಲ್ಲ. ದಾವಾ ಸ್ವತ್ತುಗಳ ಚೆಕ್ ಬಂದಿಯನ್ನು ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳನ್ನು ನಮ್ಮ ತಾಯಿಯ ತಂದೆ ನಮ್ಮ ತಾಯಿಗೆ ಬರೆದುಕೊಟ್ಟಿದ್ದಾರೆ. ನಾನು ನ್ಯಾಯಾಲಯಕ್ಕೆ ಪಹಣಿ ಮತ್ತು ವಂಶವೃಕ್ಷವನ್ನು ಕೊಟ್ಟಿದ್ದೇನೆ. ಮುದ್ದುನರಸಿಂಹಯ್ಯ ಇವರ ಹೆಸರಿನಲ್ಲಿ ಖಾತೆ ಪಹಣಿಗಳು ಇದ್ದ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದೇವೆ. ಆ ರೀತಿ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮುದ್ದುನರಸಿಂಹಯ್ಯ ಇವರಿಗೆ ಇಬ್ಬರು ಹೆಂಡತಿಯರು ಎಂದು ಸುಳ್ಳು ಹೇಳುತ್ತಿದ್ದೇನೆ ಸರಿಯಲ್ಲ. ಅದೇ ರೀತಿ ಅವರಿಬ್ಬರು ಒಟ್ಟಿಗೆ ಸ್ವತ್ತುಗಳನ್ನು ಅನುಭವಿಸಿಕೊಂಡು ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 52 ವರ್ಷಗಳಾಗಿವೆ. ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. 2ನೇ ವಾದಿಯ ಮದುವೆಯಾಗಿ 30 ವರ್ಷಗಳಾಗಿರಬಹುದು. ಅವರು ಸಹ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ.

ನಮ್ಮ ಅಣ್ಣ ತಮ್ಮಂದಿರಿಗೆ ಬಂದ ಸ್ವತ್ತುಗಳಲ್ಲಿ ಅವರೇ ಉಳುಮೆ ಮಾಡಿಕೊಂಡು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಮದುವೆಯಾದಾಗಿನಿಂದ ನಾನು ಮತ್ತು ನನ್ನ ತಂಗಿ ಗಂಡನ ಮನೆಯಲ್ಲಿರುತ್ತೇವೆ ಎಂದರೆ ಸರಿ. ನಮ್ಮ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್‌ಗಳು ಗಂಡನ

ಮನೆಯಲ್ಲಿವೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ನನ್ನ ಜೊತೆ ಮಾತನಾಡುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ಅಣ್ಣ ತಮ್ಮಂದಿರ ಸ್ವತ್ತುಗಳೆಂದರೆ ಸರಿಯಲ್ಲ. ಅವುಗಳು ಒಟ್ಟು ಕುಟುಂಬದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ದವಾಗಿ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 4 ವರ್ಷಗಳ ಹಿಂದೆ ಭಾಗ ಕೊಡಿ ಎಂದು ನಾನು ಕೇಳಿದ್ದೇನು. ನಾನು ಮತ್ತು ನನ್ನ ತಂಗಿ ಹೋಗಿ ನನ್ನ ಸಹೋದರರನ್ನು ಭಾಗ ಕೇಳಿದ್ದೇವು, ಅವರು ಕೊಡುವುದಿಲ್ಲವೆಂದು ಹೇಳಿದ್ದರು. ಆಗ ಊರಿನ ಬೇರೆಯವರು ಯಾರು ಇರಲಿಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4 ವರ್ಷಗಳ ಹಿಂದೆ ದಾವಾ ಹಾಕುವ ಸಂದರ್ಭದಲ್ಲಿ ಪ್ರತಿವಾದಿಗಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಗೊತ್ತಾಯಿತು. ಪ್ರತಿವಾದಿ 1 ಮತ್ತು 2 ರವರು ಕಾನೂನುಬದ್ದವಾಗಿ ಆಸ್ತಿಯನ್ನು ಹಂಚಿಕೊಂಡಿದ್ದಾರೆಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದು ಹೇಳಿದ್ದೇನೆ. ಆದರೆ ಯಾವಾಗ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿ ಮಾತ್ರ ಹಕ್ಕು ಹೊಂದಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರು ಅಕ್ರಮವಾಗಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಏನು ತಕರಾರು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ದಿನಾಂಕ : 10.01.1980 ರಂದು ನನ್ನ ಅಣ್ಣ ಅಶ್ವಥನಾರಾಯಣ ಮತ್ತು ನನ್ನ ತಮ್ಮ ನರಸಿಂಹಮೂರ್ತಿ ಇವರು ಎಲ್ಲ ಸ್ವತ್ತುಗಳನ್ನು ಪಂಚಾಯಿತಿ ವಿಭಾಗಪತ್ರದ ಮೂಲಕ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳಾಗಿ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ನಮ್ಮ ಅಣ್ಣ ತಮ್ಮಂದಿರು ಜಮೀನುಗಳನ್ನು ಬೇರೆ ಬೇರೆಯಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನಾನು ನನ್ನ ತವರು ಮನೆಗೆ ಹೋಗದೇ 5/6 ವರ್ಷಗಳಾಗಿವೆ. ಅದಕ್ಕಿಂತ ಮೊದಲು ಅಲ್ಲಿಗೆ ಹೋಗಿ ಬಂದು ಮಾಡುತ್ತಿದ್ದೇನು. ನನ್ನ ಅಣ್ಣ ತಮ್ಮಂದಿರು ದಾವಾ ಸ್ವತ್ತುಗಳನ್ನು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದುದ್ದು ನನಗೆ ಗೊತ್ತಿತ್ತು. ಅವರಿಬ್ಬರು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದುದ್ದು ನನಗೆ ಗೊತ್ತಿದ್ದರಿಂದ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಿಭಾಗವಾದ ಪ್ರಕಾರ ಪ್ರತಿವಾದಿ 1 ಮತ್ತು ನರಸಿಂಹಮೂರ್ತಿ ಇವರು ದಾವಾ ಸ್ವತ್ತುಗಳನ್ನು ಖಾತೆ ಮಾಡಿಸಿಕೊಂಡು ಅನುಭವಿಸುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. 1 ನೇ

ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ, ಅವರ ಬಲಗಡೆ ಕೆನ್ನೆಯಲ್ಲಿ ಗೆಡ್ಡೆ ಆಗಿ ಅಪರೇಷನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅತ್ತಿಗೆ 5ನೇ ಪ್ರತಿವಾದಿಯ ತವರು ಮನೆಯವರ ಕಡೆಯಿಂದ 1ನೇ ಪ್ರತಿವಾದಿಯ ಚಿಕಿತ್ಸೆಗಾಗಿ ಹಣ ಪಡೆದು 4ನೇ ಐಟಂ ಸ್ವತ್ತನ್ನು 5ನೇ ಪ್ರತಿವಾದಿಗೆ ದಾನಪತ್ರ ಬರೆದು ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಖಾತೆ ಆಗಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**